ಇವರ ಮನೆ ಮೇಲೆ ಎರಗಿದ್ದರು. ನಾನಿಯ ಗಂಡ ತಲೆ ಮೇಲೆ ಬಿದ್ದ ಪೆಟ್ಟಿಗೆ ಅಲ್ಲೇ ಅಸುನೀಗಿದ್ದ. ಅವನನ್ನು ಮಣ್ಣು ಮಾಡಲೂ ಆಗದೆ ತನ್ನ ಒಬ್ಬನೇ ಮಗನನ್ನು ಕಂಕುಳಿಗೆ ಹಾಕಿಕೊಂಡು ಹೊರಟ ನಾನಿ ಸಂಸಾರ. ಅವರೊಡನೆ ಅತ್ತೆ, ಇನ್ನೂ ಮದುವೆಯಾಗದ ಮೈದುನ, ನಾದಿನಿ... ಭಾರತದ ವರೆಗೆ ಕತ್ತಲೆಯಲ್ಲಿ ಹೆಜ್ಜೆ ಹಾಕಿದ್ದರು. ಮೈಲುಗಟ್ಟಳೆ ದಾರಿ ಸವೆಸಲು ಎಲ್ಲರ ಸೆರಗಲ್ಲಿ, ಜೇಬಲ್ಲಿ ಒಂದು ಹಿಡಿ ಅವಲಕ್ಕಿ. ಅಲ್ಲೇ ಉಳಿದಿತ್ತು ಇವರ ನೆಮ್ಮದಿಯ ಬದುಕು– ಸಣ್ಣ ಸ್ವಂತ ಮನೆ, ದಿನಸಿ ಅಂಗಡಿ, ಪಾತ್ರೆ ಪಡಗ, ರೇಡಿಯೋ... ಜೊತೆಗೆ ರಕ್ತದ ಮಡುವಲ್ಲಿ ಬಿದ್ದಿದ್ದ ಗಂಡ. ಬೆಳಗಿನ ಹೊತ್ತು ಎಲ್ಲಾದರೂ ಅವಿತಿಟ್ಟುಕೊಳ್ಳುತ್ತಾ, ರಾತ್ರಿ ಬೇಗ ಬೇಗ ದಾರಿ ಸವೆಸುತ್ತಾ ನಡೆದಿದ್ದರು. ಹಾಗೂ ಹೀಗೂ ಭಾರತದ ಗಡಿ ತಲಪುವ ಹೊತ್ತಿಗೆ ಕುಟುಂಬದಲ್ಲಿ ಇನ್ನೊಬ್ಬ ವ್ಯಕ್ತಿ ಕಡಿಮೆ. 'ಮಾಂಜಿಕೋ ರಾಸ್ತಾ ಮೆ ಛೋಡನಾ ಪಡಾ, ಒಂದು ಬಾವಿ ಹಿಂದೆ ಅವಿತಿಟ್ಟುಕೊಂಡಿದ್ದೆವು. ಕಗ್ಗತ್ತಲು. ಬೆಳಗಿನ ಜಾವ ಮಾಂಜಿ ಹೇಳಿದರು: 'ಇನ್ನು ನಂಗೆ ಆಗೊಲ್ಲ, ಕಾಲು ಸೆಟೆದುಕೊಂಡಿದೆ. ನೀವೆಲ್ಲಾ ಮುಂದೆ ಹೋಗಿ. ತಡ ಮಾಡಬೇಡಿ. ನೀವೂ ಸಿಕ್ಕಿ ಹಾಕಿಕೊಳ್ಳುತ್ತೀರಾ. ನನಗೆ ದೇವರು ಮಾಡಿಸಿದ ಹಾಗೆ ಆಗುತ್ತೆ...' ನಾನಿ ಸ್ವಲ್ಪ ಹೊತ್ತು ಮೌನವಾಗಿದ್ದರು. 'ಅವರೀಗೇನಾಯ್ತೋ ಗೊತ್ತಿಲ್ಲ...' ಗೊತ್ತಿದ್ದನ್ನೂ ಗೊತ್ತಿಲ್ಲದಂತೆ ಇರುವ ಮೂಲಕ ಆ ಸಂಕಟವನ್ನು ನಾನಿ ದಾಟಿದ್ದಾರೆ ಅನ್ನಿಸಿತು.

'ಅಲ್ಲಿಂದ ದಿಲ್ಲಿ, ರೈಫ್ಯೂಜಿ ಕ್ಯಾಂಪು... ಅಂಗೈಯಗಲ ಜಾಗಕ್ಕೆ ಕಾದಾಟ. ಮಕ್ಕಳು ಮರಿಗೆ ವಾಂತಿ ಭೇದಿ. ಒಂದು ಲೋಟ ನೀರಿಗೂ ಪರದಾಟ.'

'ಕೊನೆಗೆ ಮುಂಬೈ ಉಲ್ಲಾಸ ನಗರದಲ್ಲಿ ಒಂದು ಕೋಣೆ ಸಿಕ್ಕಿತ್ತು. ಆದರೆ ಹೊಟ್ಟೆ ತುಂಬಿಕೊಳ್ಳೋದು ಹೇಗೆ. ಮಗ ಹಗಲು ರಾತ್ರಿ ಅಂಗಡಿ ಲೆಕ್ಕ ಬರೀತಿದ್ದ. ನಾವು ಹಪ್ಪಳ, ಉಪ್ಪಿನಕಾಯಿ ಮನೆ ಮನೆಗೆ ಕೊಂಡು ಹೋಗಿ ಮಾರುತ್ತಿದ್ದೆವು. ಬೇಡಪ್ಪಾ ಬೇಡ ನಮ್ಮ ಕಷ್ಟ. ಈಗ ನೋಡು ಭಗವಂತನ ದಯೆ. ಇಲ್ಲಿ ಇಷ್ಟು ನೆಮ್ಮದಿಯಾಗಿದ್ದೇವೆ.'

ಕತ್ತಲಾಗಿತ್ತು. ಮಾಲತಿಗೆ ನಾನಿಯ ಕಣ್ಣುಗಳು ಕಾಣಿಸುತ್ತಿರಲಿಲ್ಲ. ಆ ಕ್ಷಣದಲ್ಲಿ 'ಬುಡ್ಡಿ ಬಹುತ್ ಕಂಜೂಸ್ ಹೈ... ಸಿಂಧಿ ಹೈ ನ...' ಎಂದು ಜನರು ಮಾಡುತ್ತಿದ್ದ ಕುಹಕ ಮಾಲತಿಯ ಮನಸ್ಸನ್ನು ಕುಟುಕಿತು.

★★★

ಒಲೆಮೇಲೆ ಕುದಿಯುತ್ತಿದ್ದ ರುಚಿ ರುಚಿ ಅಡುಗೆ ಆವಿ ಆವಿಯಾಗಿ ಹೊತ್ತು ತರುವ ಘಮ ಮನದಾಳದಲ್ಲಿ ಹೊಡದೆಬ್ಬಿಸುವ ನೆನಪಿನ ಕಂತೆಗಳು, ಮಸುಕು ಚಿತ್ರಗಳು, ತಲ್ಲಣ, ಕ್ಷೋಭೆಗಳು ಉಂಟು ಮಾಡುವ ಪಲ್ಲಟಗಳ ಬಗ್ಗೆ ಮಾಲತಿಯ ಮನದಲ್ಲಿ ಅಪಾರ ಅಚ್ಚರಿ ಮೂಡಿತು.

ಇಷ್ಟೆಲ್ಲಾ ಎದುರಿಸಿದ್ದರೂ ನಾನಿಯ ಎದೆಯಾಳದಲ್ಲಿದ್ದ ಅಕ್ಕರೆಯ ಕಡಲು ಕದಡಿರಲಿಲ್ಲ ಎಂಬ ವಿಷಯ ಅವಳ ಕಣ್ಣು ಹನಿಗೂಡಿಸಿತು.

## ಉಮಾ ರಾವ್

ಪುಟ್ಟ ಸಂಗತಿಗಳಲ್ಲಿ ಬದುಕಿನ ಚಿತ್ರಣ ಕೊಡುವ ಉಮಾ ರಾವ್ ಕನ್ನಡದ ವಿಶಿಷ್ಟ, ಆಧುನಿಕ ಸಂವೇದನೆಯ ಕತೆಗಾರ್ತಿ. 'ಆಗಸ್ತ್ಯ', 'ಸಿಲೋನ್ ಸುಶೀಲಾ', 'ಹಾವಾಡಿಗ ಮೀಸೆ ಹೆಂಗಸರು ಮತ್ತು ಇತರರು', 'ಕಡಲಹಾದಿ', 'ನೂರುಸ್ವರ', 'ಅವಳ ಸೂರ್ಯ', 'ಮುಂಬೈ ಡೈರಿ', 'ಬೆಳಕಿನ ಕೋಲು' ಅವರ ಪ್ರಕಟಿತ ಪುಸ್ತಕಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.